ತಿರಿಗೆಯನ್ನು ಕೊಡಬೇಕಾಗುತ್ತದೆ. ಈ ಒಂದು ವ್ಯವಸ್ಥೆಯನ್ನು ಆ ಸ್ಥಳೀಯ ಸಂಸ್ಥೆಗಳ ಸಂಪನ್ಮೂಲ ಗಳನ್ನು ಹೆಚ್ಚು ಮಾಡಿಕೊಳ್ಳಲಿ ಎನ್ನುತಕ್ಕಂಥ ಉದ್ದೇಶದಿಂದ ನಾವು ಆ ರೀತಿ ಮಾಡಿದ್ದೇವೆ. ಆದ್ದರಿಂದ ಈ ತಿದ್ದುಪಡಿ ಮಸೂದೆಯನ್ನು ಮಾನ್ಯ ಸದಸ್ಯರು ಸರ್ವಾನುಮತದಿಂದ ಅಂಗೀಕರಿಸಬೇಕೆಂದು ಕೇಳಿ ಕೊಳ್ಳುತ್ತೇನೆ.

Mr. Chairaman.—Now, I will put the consideration motion to the vote of the House. The question is :

"That the Karnataka Municipalites (Amendment) Bill, 1984 be taken into consideration".

THE MOTION WAS ADOPTED

CLAUSE BY CLAUSE CANDUAL IN CONSIDERATION

Mr. Chairman.—I will put Clause 2-7 to the vote of the House. The Question is :

That Clauses 2 to 7 Bothinclusive, do stand part of the Bill"

The motion was adopted and Clauses 2 to 7 both iclusive were added to the bill.

CLAUSE 1 ETC,

Mr. Chairman.—The question is :

"That Clause 1, the preamble, the long title and the enaeting formula do stand part of the bill".

THE MOTION WAS ADOPTED And

Clause 1, the preamble, the long title and the enacting fomula were added to the bill

MOTION TO PASS

Sri M. Chandrasekhar (Minister for Urban Development) : Sir, I move :

"That the Karnataka Municipalities (Amendment) Bill, 1984 be passed.

Mr. Chairman.—Motion moved. The question is :

"That the Karnataka Municipalities (Amendment Bill 1984 be passed".

The motion was adopted and the bill was passed.

THE REGISTRATION (KARNATAKA AMENDMENT) BILL 1984 MOTION TO CONSIDER

Sri V. L. Patil (Minister for Revenus): Sir. I beg to move :

"That Registration (Karnataka Amendment) Bill, 1984 be taken into consideration".

THE QUESTION WAS PROPOSED

ಶ್ರೀ ವಿ.ಎಲ್. ಪಾಟೀಲ್.—ಮಾನ್ಯ ಸಭಾಪತಿಗಳೇ, ಈ ರೀತಿ ಮಾಡುವುದರಿಂದ ಸುಮಾರು 40 ಕೋಟಿ ರೂಪಾಯಿ ಆದಾಯ ಸರ್ಕಾರಕ್ಕೂ ಬರುತ್ತದೆ. ನೊಂದಣಿಯಾದ ಎಲ್ಲಾ ಕಾಗದಪತ್ರ ಗಳನ್ನು ರಿಜಿಸ್ಟರ್ ಪ್ರೋಸ್ಟ್ ಮೂಲಕ ಕಳುಹಿಸಬೇಕು. ಸ್ವತಃ ಕೂಡ ಕಾಗದಪತ್ರಗಳನ್ನು ತೆಗೆದು ಕೊಂಡು ಹೋಗುವ ವ್ಯವಸ್ಥೆ ಇದರಲ್ಲಿ ಇದೆ. ನೊಂದಣಿಯಾದ ಕಾಗದಪತ್ರಗಳನ್ನು ಅದರ ನಕಲು ಪತ್ರಗಳನ್ನು ತಕ್ಷಣ ಕೊಡಬೇಕೆನ್ನುವ ವ್ಯವಸ್ಥೆ ಇದರಲ್ಲಿದೆ. ನೊಂದಣಿಯಾದ ತಕ್ಷಣ ಪತ್ರ ನಾಶವಾಗ ಬಹುದು, ರಿಜಿಸ್ಟರ್ ಆದ ತಕ್ಷಣ ಕಾಪಿಯನ್ನು ಕೊಡುವಂತಹ ವ್ಯವಸ್ಥೆ ಇದರಲ್ಲಿದೆ. ಈಗ ಎಕ್ಸ್‌ಪರಿ ಮೆಂಟ್ ಸಲುವಾಗಿ 19 ಕಾಪಿಯಿಂಗ್ ಮೆಷಿನ್‌ಗಳನ್ನು ಕೊಂಡುಕೊಂಡು ಎಲ್ಲೆಲ್ಲಿ ಜಾಸ್ತಿ ಕೆಲಸವಿರು ತ್ತದೆ ಅಲ್ಲಲ್ಲಿ ಆ ಮೆಷಿನ್‌ಗಳನ್ನು ಇಡಬೇಕು ಎನ್ನುವ ವ್ಯವಸ್ಥೆಯನ್ನು ಮಾಡಿದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಸಭಾಪತಿಗಳೆ, ಇವತ್ತು ಬೆಳಿಗ್ಗೆ ನಗರಾಭಿವೃದ್ಧಿ ಸಚಿವರ ಕೊಠಡಿಯಲ್ಲಿ ಒಂದು ಸಭೆ ನಡೆಯಿತು. ಆ ಸಭೆಯಲ್ಲಿ ಏನಾಯಿತು ಅಂದರೆ ಆ ಸಭೆಯೊಳಗೆ ತಮ್ಮ ಬಿಲ್‌ನ ಬಗ್ಗೆ ಪ್ರಸ್ತಾಪವಾಯಿತು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಅಕ್ವೈರ್ ಮಾಡಲಿಕ್

ನೋಟೀಫಿಕೇಶನ್ ಕೊಡುತ್ತಾರೆ. ನೋಟೀಫಿಕೇಶನ್ ಆದಮೇಲೆ ಅದು ಸೇಲ್ ಆಗುತ್ತದೆ. ಇಂಥ ರಿಜಿಸ್ಟ್ರೇಷನ್ ಪ್ರಿವೆಂಟ್ ಮಾಡಲಿಕ್ಕೆ ಪ್ರಯತ್ನ ಮಾಡದಿದ್ದರೆ ಆಗ ಇಂತಹ ಅವ್ಯವಹಾರ ನಡೆಯುತ್ತವೆ.

ಶ್ರೀ ಎ. ಲಕ್ಷ್ಮೀಸಾಗರ್.—ಅದನ್ನು ಇಲ್ಲಿ ಪ್ರಸ್ತಾಪ ಮಾಡಲಾಗಿದೆ. ಅದನ್ನು ನಾವು ಮಾಡುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದನ್ನು ತಾವು ಗಮನಕ್ಕೆ ತೆಗೆದುಕೊಂಡು ಅದಕ್ಕೆ ಒಂದು ತಿದ್ದುಪಡಿ ತಂದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಏನೇನು ಅವ್ಯವಹಾರ ನಡೆಯುತ್ತವೆ ಅದು ಬಹು ಭಾಗ ನಿಲ್ಲುವಹಾಗೆ ಆಗುತ್ತದೆ. ರಿಜಿಸ್ಟ್ರೇಷನ್ ಹೇಗೆ ಆಗುತ್ತದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಮನೆ ಕಟ್ಟಿಕೊಳ್ಳುತ್ತಾರೆ, ಆಮೇಲೆ ಬೆಂಗಳೂರು ಪ್ರಾಧಿಕಾರದವರು ಬುಲ್ಡೋಜರ್‌ನಿಂದ ಮನೆಗಳನ್ನು ಕೆಡವುತ್ತಾರೆ. ಇದರಿಂದ ಏನಾಗುತ್ತದೆ ? ರಿಜಿಸ್ಟ್ರೇಷನ್ ಮಾಡಲಿಕ್ಕೆ ಅವಕಾಶವಿದೆ ಎಂದು ಹೇಳುತ್ತಾರೆ. ಇಂತಹ ಅನಾಹುತಗಳನ್ನು ತಪ್ಪಿಸಲಿಕ್ಕೆ ರಿಜಿಸ್ಟ್ರೇಷನ್ ಆಕ್ಟ್‌ಗೆ ತಿದ್ದುಪಡಿಗೆ ತರಬೇಕು. ಆ ರೀತಿ ಮಾಡುವುದರಿಂದ ಇಂತಹ ಅನಾಹುತಗಳನ್ನು ತಪ್ಪಿಸಬಹುದೆಂದು ನಾನು ಬೆಳಿಗ್ಗೆ ನಡೆದ ಸಭೆಯಲ್ಲಿ ಹೇಳಿದ್ದೇನೆ. ರಿಜಿಸ್ಟ್ರೇಷನ್ ಆಕ್ಟ್‌ಗೆ ತಿದ್ದುಪಡಿ ತಂದಿದ್ದರೆ ಬಹಳ ಒಳ್ಳೆಯದಿತ್ತು.

ಶ್ರೀ ಎಂ. ಎಸ್. ಪಾಟೀಲ್.—ಈಗ ಮಾನ್ಯಮಂತ್ರಿಗಳು ಫೋಟೋಸ್ಟಾಟ್ ಕಾಪಿ ನಿರ್ದಿಷ್ಟವಾದ ಕಾಪಿ ಅಲ್ಲವೆಂದು ಹೇಳುತ್ತಾರೆ. ಅದರ ಬಗ್ಗೆ ಒಂದು ವಿಶಿಷ್ಟವಾದ ಕಾಲಂ ಅನ್ನು ಅಳವಡಿಸಿದರೆ ಒಳ್ಳೆಯದಾಗುತ್ತದೆಂದು ನನಗನಿಸುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರಾದ ಎಂ.ಎಸ್. ಪಾಟೀಲರವರ ಸಂಶಯ ಏನೆಂದರೆ ಫೋಟೋಸ್ಟಾಟ್ ಕಾಪಿಗಳನ್ನು ಬೇರೆ ಆಫೀಸುಗಳಲ್ಲಿ ಕೊಟ್ಟಾಗ, ಅದು ನಿರ್ದಿಷ್ಟವಾದ ಕಾಪಿಯಲ್ಲವೆಂದು ಹೇಳುತ್ತಾರೆಂದು ಹೇಳಿದ್ದಾರೆ. ಅದನ್ನು ಒಪ್ಪಿಕೊಳ್ಳುವಂತೆ ರಿಜಿಸ್ಟ್ರೇಷನ್ ಆಕ್ಟ್ ರೂಲ್ಸ್‌ನ್ನು ಬದಲಾವಣೆ ಮಾಡಿ ಫೋಟೋಸ್ಟ್ಯಾಟ್ ಕಾಪಿ should be treated as if it is a certified copy ಎನ್ನುತಕ್ಕ ಕಾಲಂ ಅನ್ನೂ ಪ್ರೊವೈಡ್ ಮಾಡಿ ಮುಂಜಾಗ್ರತೆ ಕ್ರಮವನ್ನು ತೆಗೆದುಕೊಂಡಿದ್ದೇವೆ. ಜನಗಳಿಗೆ ತೊಂದರೆಯಾಗದಿರಲಿಯೆಂದು ; ರಿಜಿಸ್ಟರ್ ಪೋಸ್ಟ್‌ನಲ್ಲಿ ಕಳುಹಿಸತಕ್ಕ ವ್ಯವಸ್ಥೆಯನ್ನೂ ಮಾಡಿದ್ದೇವೆ. ಇದರಿಂದ ತೊಂದರೆಯೇನೂ ಬರುವುದಿಲ್ಲ.

ಶ್ರೀ ಎಂ.ಎಸ್ ಪಾಟೀಲ್.—ಫೋಟೋಸ್ಟಾಟ್ ಕಾಪಿ ಕೊಡುವುದರಿಂದ ಲಂಚದ ಹಾವಳಿಯನ್ನು ತಪ್ಪಿಸಲಿಕ್ಕೆ ಹೇಗೆ ಸಾಧ್ಯ ?

ಶ್ರೀ ಎ. ಲಕ್ಷ್ಮೀಸಾಗರ್.—ಒಂದು ಪತ್ರವನ್ನು ರಿಜಿಸ್ಟರ್ ಮಾಡಲಿಕ್ಕೆ ಎಂದು ಇಟ್ಟುಕೊಳ್ಳಿ ಕೊಟ್ಟ ತಕ್ಷಣ ರಿಜಿಸ್ಟರ್ ಮಾಡಿ, ಕಾಪಿ ತೆಗೆಸಿ ಸಿಜಿಸ್ಟರ್ ಪೋಸ್ಟ್ ಮುಖಾಂತರ ಈಗಿರುವ ಕಾನೂನು ಪ್ರಕಾರ ತರಿಸಿಕೊಳ್ಳಬಹುದು. ಸೇಲ್ ಡೀಡ್ ಅನ್ನು ಕಡ್ಡಾಯವಾಗಿ as per Indian Registration Act ರಿಜಿಸ್ಟರ್ ಆಗಬೇಕು ಎನ್ನುವ ಕಾನೂನು ಇದೆ. ಕಾಗದ ರಿಜಿಸ್ಟರ್ ಆಗ ಬೇಕಾಗುತ್ತದೆ. ಅಸಲು ಪತ್ರವನ್ನು ಕೊಟ್ಟಾಗ ಅದನ್ನು ಇಟ್ಟುಕೊಳ್ಳುತ್ತಾರೆ. ಅದನ್ನು ಬರೆಯಿಸಿದವರಿಗೋಸ್ಕರ ಇಟ್ಟುಕೊಂಡು ಬರೆದು ಆದಮೇಲೆ ವಾಪಸ್ಸು ಕೊಡಲಿಕ್ಕೆ ತೊಂದರೆಯಿದೆ ಎನ್ನುವುದನ್ನು ಕಂಡುಹಿಡಿದು, ಆತ ಆಫೀಸಿಗೆ ತಿರುಗಾಡುವುದನ್ನು ತಪ್ಪಿಸಿದ್ದಾರೆ. ರಿಜಿಸ್ಟರ್ ಆದ ತಕ್ಷಣ ಒರಿಜನಲ್ ಕಾಪಿಯನ್ನು ವಾಪಸ್ಸು ಕೊಡುತ್ತಾರೆ.

ಶ್ರೀ ಎಂ.ಜಿ. ಜರತಾರ್‌ಗರ್—ಮಾನ್ಯಮಂತ್ರಿಗಳು ನೊಂದಣಿ ಬಗ್ಗೆ ಹೇಳಿದ್ದಾರೆ. ರೈತರ ಹೊಲ ಮನೆ ತೆಗೆದುಕೊಂಡರೆ ಕೆಲವು ಕ್ರಮ ತೆಗೆದುಕೊಳ್ಳುತ್ತಾರೆ ಅದು ಒಳ್ಳೆಯದು ಇದೆ. ಆದರೆ ಲಕ್ಷಾಂತರ ರೂಪಾಯಿ ವ್ಯವಹಾರ ನಡೆಯುವಾಗ 5 ಸಾವಿರ, 3 ಸಾವಿರ 2 ಸಾವಿರ ಈ ತರಹ ತೆಗೆದುಕೊಳ್ಳುತ್ತಾರೆ ಅದನ್ನು ನಿಲ್ಲಿಸಲಿಕ್ಕೆ ಯಾವ ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ವಿ.ಎಲ್. ಪಾಟೀಲ್.—ಈಗಾಗಲೇ ಅಂತಹ ಕೇಸುಗಳ ಬಗ್ಗೆ ತನಿಖೆ ನಡೆಯುತ್ತಿದೆ. ಆ ತರಹ ಏನಾದರೂ ವ್ಯವಹಾರ ನಡೆಯುತ್ತಿದ್ದರೆ ದೂರು ಕೊಟ್ಟರೆ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸಭಾಪತಿಗಳೆ, ತಾವು ರಿಜಿಸ್ಟ್ರೇಷನ್‌ಗೆ ಹೋದಾಗ ತಮಗೆ ಒಂದು ಅನುಭವಕ್ಕೆ ಬಂದಿರಬಹುದು. ಸ್ಟ್ಯಾಂಪ್ ಡ್ಯೂಟಿ ಸರಿಯಾಗಿ ಕೊಟ್ಟಿಲ್ಲವೆಂದು ಶುರುವಾಗುತ್ತದೆ. ಯಾವುದೋ ಒಂದು ಮಧ್ಯಸ್ಥಿಕೆಯಿಂದ ಎಲ್ಲಾ ವ್ಯವಹಾರವನ್ನು ಮುಗಿಸಿ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳುತ್ತಾರೆ. ಇದನ್ನೆಲ್ಲಾ ತಡೆಯುವುದಕ್ಕೆ ಜೊತೆಗೆ ರಿಜಿಸ್ಟ್ರೇಷನ್‌ಗೆ ಹೋಗತಕ್ಕ ಜನಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸ್ಟ್ಯಾಂಪ್ ಡ್ಯೂಟಿಯನ್ನು ಜಮೀನಿನ ಆಧಾರದ ಮೇಲೆ ಅಥವಾ ಖರೀದಿಯ ಆಧಾರದ ಮೇಲೆ ಎಷ್ಟು ಕೊಡಬೇಕೆಂಬ ಒಂದು ಪಟ್ಟಿಯನ್ನು ತಯಾರುಮಾಡಿದ್ದೇವೆ. ಸೇಲ್ ಡೀಡ್ ಎಷ್ಟು ರೂಪಾಯಿ ಕೊಡಬೇಕೆನ್ನುವುದು ಕಾನೂನು ಇದೆ. ಕಾನೂನಿನ ಪ್ರಕಾರ ಉಭಯತ್ತರು ಸೇರಿ ಇರತಕ್ಕ ತೊಂದರೆಯನ್ನು ಕಡಿಮೆ ಮಾಡುವುದಕ್ಕೆ ಸಹಾಯ ಮಾಡಬೇಕು. ಈಗ ಅದ

ಕ್ಕೊಂದು ಕಾನೂನು ಮಾಡಿರುವುದರಿಂದ ಸ್ವಲ್ಪಮಟ್ಟಿಗೆ ಸರಿಹೋಗುತ್ತದೆ. ನಾವು ಈಗಾಗಲೇ ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ.

2-30 p.m.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಏನು ಭ್ರಷ್ಟಾಚಾರ ನಡೆಯುತ್ತಿದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ. ಮೇಲ್ನೋಟಕ್ಕೆ ಏನಾದರೂ ಉತ್ತರ ಕೊಡಬಹುದು. ಆದರೆ ಆರ್.ಟಿ.ಒ. ಮತ್ತು ಸಬ್ ರಿಜಿಸ್ಟ್ರಾರ್ ಕಚೇರಿಗಳಲ್ಲಿ ಲಂಚ ಇಲ್ಲದೆ ನೂರಕ್ಕೆ ತೊಂಬತ್ತೊಂಬತ್ತರಷ್ಟು ಯಾವ ಕೆಲಸವೂ ಆಗುವುದಿಲ್ಲ. ಇದು ಜಗಜ್ಜಾಹೀರಾದ ಸಂಗತಿಯಾಗಿದೆ. ನೀವು ಯಾವುದಾದರೂ ಸಬ್ ರಿಜಿಸ್ಟ್ರಾರ್ ಕಚೇರಿಗೆ ಹೋಗಿನೋಡಿ. ನೋಟಿನ ಕಂತೆಗಳೇ ಸೀಗುತ್ತವೆ. ಇವತ್ತು ಜನತೆ ಅಪೇಕ್ಷೆ ಪಡುವುದು ಏನನ್ನು ? ಭ್ರಷ್ಟಾಚಾರ ನಿರ್ಮೂಲನ ಮಾಡುವುದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನಮಾಡಿ. ನಿಜ, ಕಾನೂನಿನಲ್ಲಿ ಇದನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ಆದರೆ, ಭ್ರಷ್ಟಾಚಾರ ನಡೆಯುತ್ತಿಲ್ಲವೇ ? ದುಡ್ಡು ಕೊಡದೇ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನೂರಕ್ಕೆ ತೊಂಬತ್ತೊಂಬತ್ತರಷ್ಟು ಯಾವ ಕೆಲಸವೂ ಆಗುವುದಿಲ್ಲ. ನೀವು ಇದರ ಬಗ್ಗೆ ಕೈಕಟ್ಟಿ ಕುಳಿತುಕೊಂಡರೆ ಹೇಗೆ ? ಅವರು ಇದ್ದಾಗ ಸ್ವಲ್ಪಪಾದರೂ ಭಯ ಇತ್ತು. ಈಗಂತೂ ಭ್ರಷ್ಟಾಚಾರ ತಾಂಡವಾಡುತ್ತಿದೆ. ಇದನ್ನು ತಡೆಗಟ್ಟುವುದಕ್ಕೆ ನೀವು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಲ್. ಪಾಟೀಲ್.—ಇದಕ್ಕಾಗಿಯೇ ಈಗ ತಪ್ಪಿತಸ್ಥರನ್ನು ಸಸ್ಪೆಂಡ್ ಮಾಡುತ್ತಿದ್ದೇವೆ. ಟ್ರಾನ್ಸ್‌ಫರ್ ಮಾಡುತ್ತಿದ್ದೇವೆ.

ಶ್ರೀ ಮಲ್ಲಾರಗೌಡ ಪಾಟೀಲ್.—ನಾನು ಮಾನ್ಯ ಕಂದಾಯ ಸಚಿವರನ್ನು ಕೇಳುತ್ತೇನೆ. ನೀವು ಎಷ್ಟು ಜನರನ್ನು ಸಸ್ಪೆಂಡ್ ಮಾಡಿದ್ದೀರಿ ? ಟ್ರಾನ್ಸ್‌ಫರ್ ಮಾಡುವುದರಿಂದ ಭ್ರಷ್ಟಾಚಾರ ಕಡಿಮೆಯಾಗುತ್ತದೆ ಎಂಬ ಭಾವನೆ ನಿಮಗೆ ಇದೆಯೆ ? ಇದ್ದರೆ ಎಷ್ಟು ಜನರನ್ನು ಟ್ರಾನ್ಸ್‌ಫರ್ ಮಾಡಿದ್ದೀರಿ ಹೇಳಿ. ಇದರಿಂದ ಲಂಚ ತೆಗೆದು ಕೊಳ್ಳುವುದು ಎಷ್ಟು ಕಡಿಮೆ ಆಗಿದೆ ? ನಿಮಗೆ ಬೆಂಬಲ ನೀಡತಕ್ಕಂಥ ಪಕ್ಷದವರೇ ಆದ ಮಾನ್ಯ ಯಡಿಯೂರಪ್ಪನವರು ಈ ಭ್ರಷ್ಟಾಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದು ಹಿಂದಿನಿಂದ ಪ್ರಾರಂಭವಾಗಿದ್ದು ಎನ್ನುವುದಾದರೆ ಹಿಂದೆ ಕೂಡ ನೀವೇ ಇದ್ದವರು, ಇದನ್ನು ತಡೆಗಟ್ಟುವಿಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಹೇಳಿ. ಸಬ್ ರಿಜಿಸ್ಟ್ರಾರ್ ಕಚೇರಿಗೆ ರೈತರು ಅನಿವಾರ್ಯವಾದ ಪರಿಸ್ಥಿತಿಯಲ್ಲಿ, ಜೊಲ ಮಾರುವುದಕ್ಕೆ, ಮನೆ ಮಾರುವುದಕ್ಕೆ ಹೋಗುತ್ತಾರೆ. ಆ ಸಂಬರ್ಭದಲ್ಲಿ ಅವರು ಲಂಚ ಕೊಡಲೇಬೇಕಾಗುತ್ತದೆ. ಇದನ್ನು ಕಡಿಮೆ ಮಾಡುವುದಕ್ಕೆ ಏನು ಮಾಡುತ್ತಿದ್ದೀರಿ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಫೋಟೋಸ್ಟ್ಯಾಟ್ ಕಾಪಿಯನ್ನು ಕೊಡಲು ಅನುವು ಮಾಡಿಕೊಟ್ಟಿದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಇದನ್ನು ಕೊಡುವುದರಿಂದ ಭ್ರಷ್ಟಾಚಾರ ಕಡಿಮೆಯಾಗುತ್ತದೆ. ಇಲ್ಲವೆಂದು ನಾನು ಹೇಳುವುದಿಲ್ಲ. ಒಳ್ಳೆಯ ಚಿಂತನೆ ಮಾಡಿ ಇದನ್ನು ತರುತ್ತಿದ್ದೀರಿ. ಇದನ್ನು ಸಂಪೂರ್ಣವಾಗಿ ನಾನು ಸ್ವಾಗತ ಮಾಡುತ್ತೇನೆ. ಇದರ ಅವಶ್ಯಕತೆ ಇದೆ. ಆದರೆ ಇದರ ಜೊತೆಗೆ ಭ್ರಷ್ಟಾಚಾರ ಏನು ನಡೆಯುತ್ತಿದೆ ಅದರ ಬಗ್ಗೆ ಗಮನ ಕೊಡಬೇಕು. ಇದು ಅತ್ಯಾವಶ್ಯಕವಾಗಿ ಮಾಡಬೇಕಾಗಿ ಇರುವಂತಾದ್ದು.

ಶ್ರೀ ಬಿ.ಎಲ್. ಪಾಟೀಲ್.—ನಿಜ, ಭ್ರಷ್ಟಾಚಾರ ಇದೆ. ಸರ್ಕಾರ ಇದನ್ನು ಕಡಿಮೆ ಮಾಡಲು ಎಲ್ಲಾ ಕಾರ್ಯಕ್ರಮ ತೆಗೆದುಕೊಳ್ಳುತ್ತಿದೆ. ಈ ಮಸೂದೆಯನ್ನು ತಂದಿರುವುದು ಕೂಡ ಒಂದು ಕಾರ್ಯಕ್ರಮ ಎಂದು ನಾನು ಹೇಳುತ್ತೇನೆ.

Mr. Chairman.—The question is :

"That the Registration (Karnataka Amendment) Bill, 1984 be taken into consideration."

The motion was adopted

Clause by Clause Consideration

Clauses 2 to 6.

Mr. Chairman.—The question is :

"That Clauses 2 to 6, both inclusive, do stand part of the Bill."

The Motion was adopted and Clauses 2 to 6, both inclusive were added to the bill.

Clause 1, etc.,

Mr. Chairman.—The question is :

"That Clause 1, the Title, the Preamble and the Enacing For-

mula do stand part of the Bill."

The Motion was adoptad and Clause 1, the Title, the preamle and the Enacting Formula were added to the Bill.

Motion to Pass

Sri V.L. Patil (Min. for Revenue).—Sir, I beg to move :

"That the Registration (Karnata Amendment) Bill, 1984 be passed."

Mr. Chairman.—The Question is :

"That the Registration (Karnatakaka Amendment) Bill, 1984 be passed."

The motion was adopted and the Bill was passed.

THE KARNATAKA ZILLA PARISHAD, TALUK PANCHYAT SAMITIS, MANDAL PANCHAYATS AND NYAYA PANCHAYATS BILL, 1983.

Motion to consides

Sri Abdul Nazir Sab (Minister for Rural Development and Panchayat Raj).—I beg to move :

"That the amendments adopted by the Legislative Council to the Karnataka Zill Parishad, Taluk Panchayat Samithis, Mandal Panchayats and Nyaya Panchayats Bill as required under Rule 110 of the Rules of Procedure and Conduct of Business in the Karnataka Legislative Assembly be taken into consideration."

The question was proposed.

ಶ್ರೀ ಅಬ್ದುಲ್ ನಜೀರ್ ಸಾಬ್.—ಸನ್ಮಾನ್ಯ ಅಧ್ಯಕ್ಷರೇ, ಇದರಲ್ಲಿ ಕ್ಲಾಸ್ ಒಂದು–ಸಬ್‌ಕ್ಲಾಸ್ ಎರಡರಲ್ಲಿ ಜುರಿಸ್ಡಿಕ್ಷನ್ ಆಫ್ ದಿ ಬಿಲ್—ಹೋಲ್ ಏರಿಯಾ "ಕರ್ನಾಟಕ" ಎಂದು ಮಾಡಿರಲಿಲ್ಲ. ಇದನ್ನು ಸೇರಿಸಿಕೊಂಡಿದ್ದೇವೆ. ಇನ್ನೊಂದು ಕ್ಲಾಸ್ ಮೂರರಲ್ಲಿ ನ್ಯಾಯ ಪಂಚಾಯತಿ ಮೂರು ವರ್ಷ ಇದ್ದುದನ್ನು ಐದು ವರ್ಷವೆಂದು ಒಪ್ಪಿಕೊಂಡಿದ್ದೇವೆ. ಕ್ಲಾಸ್ 5ರಲ್ಲಿ --Proviso was added to Sub-Clause (2) reg. reservation for women belonging to SCs/STs. ಈಗ 25ರಷ್ಟು ಹೆಣ್ಣು ಮಕ್ಕಳಿಗೆ ಪ್ರಾತಿನಿಧ್ಯ ಏನಿದೆ. ಇದರಲ್ಲಿ ಒಂದನ್ನು ಹರಿಜನ ಮಹಿಳೆಗೆ ಕಾದಿರಿಸಬೇಕೆಂದು ಮತ್ತೊಂದು ತಿದ್ದುಪಡಿಯಾಗಿದೆ. ಇನ್ನೊಂದು ತಿದ್ದುಪಡಿ ಎಂದರೆ ಸೆಕ್ಷನ್ 92ರಲ್ಲಿ ಮಂಡಲ ಪಂಚಾಯತಿನಿಂದ ಹೊಸದಾಗಿ ಸ್ಮಶಾನ ಮಾಡಬೇಕಾಗಿದ್ದರೆ ಮೊದಲು ಮಂಡಲ ಪಂಚಾಯತ್‌ನಿಂದ ಅಪಣೆ ಬೇಕು ಅಂತ ಇತ್ತು. ಇದು ಪ್ರೈವೇಟ್ ಆಗಿ ಇರಬೇಕೋ ಅಥವಾ ಪಬ್ಲಿಕ್ ಇರಬೇಕೋ ಎಂದು ಜಿಜ್ಞಾಸೆ ಇತ್ತು. ಇದನ್ನು 'ಪಬ್ಲಿಕ್' ಆಗಿ ಮಾಡಬೇಕೆಂದು ತಿದ್ದುಪಡಿಯನ್ನು ಒಪ್ಪಿಕೊಂಡಿದ್ದೇವೆ. ಸೆಕ್ಷನ್ 182ರಲ್ಲಿ ಜಿಲ್ಲಾ ಪರಿಷತ್ತಿಗೆ ಇದೇರೀತಿ 25ರಷ್ಟು ಹೆಣ್ಣುಮಕ್ಕಳಿಗೆ ರಿಜರ್ವೇಶನ್ ಇದೆ. ಇದರಲ್ಲಿ ಒಂದನ್ನು ಹರಿಜನ ಮಹಿಳೆಗೆ ಇರಬೇಕೆಂಬ ಒಂದು ತಿದ್ದುಪಡಿಯನ್ನು ಒಪ್ಪಲಾಗಿದೆ.

(ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

In Clause 154, (k) was omitted. ಮೊದಲು ಏನು ಇತ್ತು, ಎಂ. ಎಲ್. ಎ. ಗಳು ರಾಜ್ಯಸಭಾ ಸದಸ್ಯರು ಅಧ್ಯಕ್ಷರಿಗೆ ಸ್ಪರ್ಧಿಸುವುದಕ್ಕೆ ಪ್ರಾಹಿಬಿಶನ್ ಇತ್ತು. ಹೊಸದಾಗಿ ಒಂದು ಕ್ಲಾಸ್‌ನ್ನು ಸೇರಿಸಿದ್ದೇವೆ. ಯಾರು ಜಿಲ್ಲಾ ಪರಿಷತ್ತಿಗೆ ನಿಂತುಕೊಳ್ಳಬಯಸುತ್ತಾರೆ, ಎಂ.ಎಲ್.ಎ. ಎಂ. ಎಲ್. ಸಿ. ಲೋಕಸಭಾ ಸದಸ್ಯರಾಗಿದ್ದರೆ ಹದಿನೈದು ದಿವಸದ ಒಳಗೆ ರಾಜೀನಾಮೆಯನ್ನು ಕೊಡಬೇಕು. ಈ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಚುನಾವಣೆಯ ನಂತರ ಹದಿನೈದು ದಿವಸದ ಒಳಗೆ ಅವರು ರಾಜೀನಾಮೆ ಕೊಡಬೇಕು. 162ನೇ ಸೆಕ್ಷನ್‌ನಲ್ಲಿ ಜಿಲ್ಲಾ ಪರಿಷತ್ತಿನಲ್ಲಿ ಅವಿಶ್ವಾಸ ನಿರ್ಣಯ ಮಂಡಿಸಿದಾಕ್ಷಣ ಸರ್ಕಾರದಿಂದ ನೋಟಿಫಿಕೇಶನ್‌ನಲ್ಲಿ ರಿಮೂವಲ್ ಆರ್ಡರ್ ಆಗಬೇಕಾಗಿತ್ತು ಇದರಲ್ಲಿ ತಂದಿರುವ ತಿದ್ದುಪಡಿ ಏನೆಂದರೆ It is deemed to have been vacated the office ಇದು fool-proof amendment ಇದೆ. ಇಷ್ಟು ತಿದ್ದುಪಡಿಗಳನ್ನು ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

Sri Bheemanna Khandare.—Who will declare ?